

**ಊರೆಂಬ ಉದರ**
(ಒಂದು ಸಂಕೇತಿ ಗ್ರಾಮದ ವೃತ್ತಾಂತ)
ಲೇ: ಪ್ರಮೀಳಾ ಸ್ವಾಮಿ
ಪುಟ: 196 ಬೆಲೆ: ₹ 270
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು,
ಸಾಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ – 577 417

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

'ಷೋ' ಪಡೆದಂತೆ ಪ್ರಮೀಳಾ ವಿಧವಿಧ ಅಡುಗೆ, ತಿಂಡಿ ಪದಾರ್ಥಗಳ ಪಾಕ ವಿವರಗಳನ್ನು ಕೊಡುತ್ತಾರೆ. ಒಲೆಯೇ ಹೆಂಗಳೆಯರ ನಿತ್ಯದ ಅಗ್ನಿಕುಂಡ. ಪ್ರಮೀಳಾರ ಸಂವೇದನೆಯನ್ನು ಪೋಷಿಸಿ ಹಿಗ್ಗಿಸಿದ ಜೀವಿಗಳು ಅಪಾರ. ಪ್ರತಿಯೊಬ್ಬರದೂ ಅನನ್ಯ ಪಯಣ, ದೃಷ್ಟಿದಾನ. ಬಾಲವಿವಾಹದಂಥ ಅನಿಷ್ಟ ಪದ್ಧತಿಗೆ ತುತ್ತಾಗಿ ಬೇಗ ಬಾಳಸಂಗಾತಿಯನ್ನು ಕಳೆದುಕೊಂಡು ಬಾಲವಿಧವೆಯರಾಗಿ ನವೆದವರೇ ಇಲ್ಲಿ ಜಾಸ್ತಿ. ನಾಗಪುರದ ಸುಬ್ಬಮ್ಮಾಮಿ ಬಂದಾಗಲೆಲ್ಲ "ಉಯ್ಯಾಲೆಯಲ್ಲಿ ಕುಳಿತು, ಸಣ್ಣಗೆ ಅದನ್ನು ಆಡಿಸುತ್ತಾ ಮಹಿಳೆಯರ ಹಕ್ಕಿನ ಬಗ್ಗೆ ಮಾತನಾಡುತ್ತಿದ್ದರು". ಅವರೇ ಒಮ್ಮೆ ಪ್ರಮೀಳಾರ ಅಪ್ಪನಿಗೆ ಹೇಳಿದ ಈ ಮಾತು ನೋಡಿ – "ಹೆಂಡತಿಯ ಕೈಗೂ ತುಸು ದುಡ್ಡು ಕೊಡು. ಜೀವನ ಏನು ಅಂತ ಅವಳಿಗೂ ತಿಳಿಯಲಿ". ಆರ್ಥಿಕತೆಯ ಸುಳಿವೇ ಕೊಡದಂತೆ, ಪ್ರಪಂಚದ ಯಾವ ಸಂಗತಿಯ ಜೊತೆಗೂ ನಂಟೇ ಕುದುರದಂತೆ, ಆತ್ಮವಿಶ್ವಾಸವೇ ಬಲಿಯದಂತೆ – ನಡೆವ ಸೂಕ್ಷ್ಮ ಪುರುಷ ಹುನ್ನಾರದ ಕುರಿತ ಮಾರ್ಮಿಕ ಮಾತು ಇದು. ಇನ್ನೊಬ್ಬ ಒಂಟಿ ಜೀವಿ ಬಾಲಮ್ಮಾಮಿ ಸಕ್ಕರೆ ಅಚ್ಚು ಮಾಡುವುದರಲ್ಲಿ ಪ್ರವೀಣೆ. ಆಕೆಯ ಆತ್ಮಸಂಹಿತೆಯ ಕೇಂದ್ರ ಇರುವುದೇ ಆ ಪಾಕದ ದಿವ್ಯ ಗುಟ್ಟಿನಲ್ಲಿ. ಹೀಗಾಗಿ ಅದನ್ನಾಕೆ ಎಂದೂ ಯಾರಿಗೂ ಹೇಳುವುದಿಲ್ಲ. "ಆಕೆ ಮಾಡಿದ ಸಕ್ಕರೆ ಅಚ್ಚುಗಳು ಗಾಜಿನಂತಿರುತ್ತಿದ್ದವು." ಅದಕ್ಕೆ ಕಾರಣ ಆಕೆ ಗುಟ್ಟಾಗಿ ಹಾಕುತ್ತಿದ್ದ ಏನೋ ಪುಡಿ. "ಅದೇನು?" ಅಂತ ಬಾಲಕಿ ಪ್ರಮೀಳಾ ಕೇಳಿದಾಗಲೆಲ್ಲ "ನಿನಗೆ ಬೇಕಾದಾಗ ನಾನು ಮಾಡಿಕೊಡುವೆ. ಅದೆಲ್ಲ ಈಗಲೇ ನಿನಗೇಕೆ?" – ಎಂದು ಮಾತು